ಮಾಡಬೇಕಿನ್ನುವ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಅಲ್ಲಿಯ ನೀರಾವರಿ ಇಲಾಖೆಯವರನ್ನು ಬೃಂದಾವನ ಗಾರ್ಡನ್ ಮತ್ತು ಮ್ಯೂಸಿಕಲ್ ಫೌಂಟೇನ್ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಅಲ್ಲಿಗೆ ಮಾನ್ಯ ನೀರಾವರಿ ಇಲಾಖಾ ಸಚಿವರು ಭೇಟಿ ಕೊಟ್ಟು ಅಲ್ಲಿಗೆ ಒಬ್ಬ ಆರ್ಕಿಟೆಕ್ಟ್‌ನ್ನು ಅಪಾಯಿಂಟ್ ಮಾಡಿದ್ದಾರೆ. ಅವರಿಗೆ ಒಂದು ಡಿಸೈನ್ ಮಾಡಿ ಎಂದು ಹೇಳಿದ್ದಾರೆ. ಡಿಸೈನ್ ಬಂದ ಮೇಲೆ ಕೆಲಸ ಶುರು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ: ಅಲ್ಲಿ ಶೂಟಿಂಗ್ ಸಹ ಮಾಡಬಹುದು.

ಶ್ರೀಮತಿ ರಾಣಿ.ರೋಷನ್ ಬೇಗ್: ಶೂಟಿಂಗ್ ವ್ಯವಸ್ಥೆ ಆದಷ್ಟು ಬೇಗ ಶುರು ಮಾಡುತ್ತೇವೆ.

ಬಿ.ಎಂ.ಶ್ರೀ ಯವರ ಭವನ ನಿರ್ಮಾಣ.

171(2268)

Sri LAKSHMINARAYANA M.D.(Turuvekere): Will the Hon'ble Minister of State for Kannada and Culture be pelased to state.

a) Reason for construction of B.M.Sri Bhavan in Sampige Villeage, Dandinashivara Hobli, Turuvekere taluk, Tumkur District;

b) What are the difficulties in starting construction through adequate money is available;

c) Whether the construction work will be started by giving instructions to the concerned officers?

Smt. RANI SATISH (Minister of State for Kannada and Culture):

a) Deputy Commissioner, Tumkur District being the Chairman of the committee regarding Construction of statues,

manuments, veera soudhas and their repairs, development and maintenance was asked to submit the proposal of the Committee.

b) Deputy Commissioner Tumkur District has sent the proposal for the construction of B.M.Sri Bhavan at an estimated cost of Rs.13.00 lakhs. He has release P.W.D. a sum of Rs.2.00 lakhs out of Parliament Members Fund, and requested for the release of at least 10.00 lakhs towards construction.

c) Kannada and Culture Department is yet to receive grants towards scheme for construction of Statues, manuments, Veera Soudhas and their repairs etc, The proposal of the Deputy Commissioner for the release of funds for the Construction of B.M.Sri Bhavan will be examined after the Kannada and Culture Department gets Funds.

ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈಗ ತಾನೆ ಸದನದಲ್ಲಿ ಬಹಳ ಗೊಂದಲವಾಯಿತು. ಪ್ರಶ್ನೋತ್ತರ ಸಮಯ ಬಹಳ ಮಹತ್ತರವಾಗಿರತಕ್ಕಂಥದು. ಈ ಸಮಯದಲ್ಲಿ ಅವರವರ ಕ್ಷೇತ್ರದಲ್ಲಿ ಸದಸ್ಯರುಗಳು ಕೇಳತಕ್ಕಂಥ ಪ್ರಶ್ನೆಗಳು ಬಹಳ ಪ್ರಮುಖವಿದ್ದು ಆಗಿರುತ್ತದೆ. ಈ ಪ್ರಶ್ನೆ ಕಳೆದ 5-6 ವರ್ಷಗಳಿಂದ ಕೇಳುತ್ತಿದ್ದು ಪ್ರಶ್ನೆ ಪ್ರಶ್ನಾತೀತವಾಗಿದೆ. ಶ್ರೀ ಬಿ.ಎಂ.ಶ್ರೀಯವರು ರಾಷ್ಟ್ರದ ಒಬ್ಬ ಉತ್ತಮ ಕವಿಗಳು. ಅವರ ತಾಯಿಯ ಜನ್ಮ ಸ್ಥಳವಾಗಿರತಕ್ಕಂಥ ಸಂಪಿಗೆ ಗ್ರಾಮದಲ್ಲಿ ಅವರು ಜ್ಞಾಪಕಾರ್ಥವಾಗಿ ಆ ಗ್ರಾಮದಲ್ಲಿ ಒಂದು ಸಮುದಾಯ ಭವನವನ್ನು ಕಟ್ಟಬೇಕೆನ್ನುವ ಪ್ರಶ್ನೆ ಇನ್ನೂ ಪ್ರಶ್ನೆಯಾಗಿಯೇ ಉಳಿದಿದೆ. ಈಗಾಗಲೇ ಅಲ್ಲಿನ ಸಂಸದರು ತಮ್ಮ ನಿಧಿಯಿಂದ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದಕ್ಕೆ ಈಗಾಗಲೇ ನೀಲಿ ನಕ್ಷೆಯನ್ನು ತಯಾರು ಮಾಡಿ ಜಿಲ್ಲಾಧಿಕಾರಿಗಳು ಸುಮಾರು 13 ಲಕ್ಷ ರೂಪಾಯಿಗಳ ಒಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಈ ಬಾಬ್ತಿಗಾಗಿ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಇನ್ನೂ ಹಣ ಬಿಡುಗಡೆ ಮಾಡಿಲ್ಲವೆಂದು ಹಣ ಬಿಡುಗಡೆಯಾದ ನಂತರ ಈ ವಿಷಯದ ಬಗ್ಗೆ ನೋಡಲಾಗುವುದೆಂದು ಹೇಳಿದ್ದಾರೆ. ಸರ್ಕಾರ ಈ ಇಲಾಖೆಗೆ ಹಣ ಬಿಡುಗಡೆ

ಮಾಡಿದೆಯೇ ಅಥವಾ ಇಲ್ಲವೇ ಎನ್ನತಕ್ಕಂಥ ಮಾತನ್ನು ನಾನು ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೇ, ಈಗಾಗಲೇ ಪ್ರತಿಮೆಗಳಿಗೆ, ಸ್ಮಾರಕ ಭವನಗಳಿಗೆ, ವೀರಸೌಧಗಳ ನಿರ್ಮಾಣಕ್ಕೆ ಹಾಗೂ ನಿರ್ಮಾಣಗೊಂಡಿರತಕ್ಕಂಥ ಸ್ಮಾರಕಗಳು, ವೀರಸೌಧಗಳು ಇವುಗಳ ದುರಸ್ತಿ, ಅಭಿವೃದ್ಧಿ, ನಿರ್ವಹಣೆ ಮತ್ತು ಮೇಲ್ವಿಚಾರಣೆಗಾಗಿ ಆಯಾಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಾವು ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಹಾಗೂ ಮಾನ್ಯ ಸದಸ್ಯರು ಹೇಳಿದಂತಹ ಪ್ರಸ್ತಾವನೆಯನ್ನು, ಜಿಲ್ಲಾಧಿಕಾರಿಗಳು ಅನುಮತಿಯನ್ನು ತೆಗೆದುಕೊಂಡು ಮತ್ತು ಸಂಸದರ ಎರಡು ಲಕ್ಷ ರೂಪಾಯಿಗಳ ಮೂಲ ಮೊತ್ತದೊಂದಿಗೆ 10 ಲಕ್ಷ ರೂಪಾಯಿಗಳ ಬೇಡಿಕೆಯ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಈಗಾಗಲೇ ಕಳುಹಿಸಿದ್ದಾರೆ. ಅದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ನಾವು ಆದ್ಯತೆ ಮೇಲೆ ತೆಗೆದುಕೊಳ್ಳತಕ್ಕಂಥ ಕಾರ್ಯಕ್ರಮದಲ್ಲಿ ಈ ವರ್ಷ ಸರ್ಕಾರ ಇಲಾಖೆಗೆ ಬಿಡುಗಡೆ ಮಾಡುವಂತಹ ಹಣ ಇನ್ನೂ ಬಿಡುಗಡೆ ಆಗಿಲ್ಲ ಎನ್ನುವ ಮಾತನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ: ಮಾನ್ಯ ಅಧ್ಯಕ್ಷರೇ, ಸ್ಪಷ್ಟವಾಗಿ ಇದರ ಬಗ್ಗೆ ಹೇಳಲಿ. ಯಾವಾಗ ಮಾಡಿ ಕೊಡುತ್ತೀರಿ ಅಂತ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೇ, ಜುಲೈ ತಿಂಗಳಿನಲ್ಲಿ ಹಣ ಬಿಡುಗಡೆಯಾಗುವ ಹಿನ್ನೆಲೆಯಲ್ಲಿ ನಿರ್ದಿಷ್ಟವಾಗಿ ಇಂತಹ ದಿವಸ ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಮಂಡ್ಯ ಜಿಲ್ಲೆಯ ಬೆಳ್ಳೂರಿನಲ್ಲಿ ಜಿಲ್ಲಾ ಪಂಚಾಯತಿ ವತಿಯಿಂದ ಎಂಟು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಬಿ.ಎಂ.ಶ್ರೀಯವರ ಹೆಸರಿನಲ್ಲಿ ಒಂದು ಭವನ ನಿರ್ಮಾಣವಾಗಿದೆ. ಇದು ತಮ್ಮ ಗಮನಕ್ಕೆ ಬಂದಿರಬಹುದು. ತುಮಕೂರು ಜಿಲ್ಲೆಯ, ತುರುವೇಕೆರೆ ತಾಲ್ಲೂಕಿನ ಸಂಪಿಗೆ ಗ್ರಾಮದಲ್ಲಿ ಆಗಬೇಕೆಂದು ತಾವು ಕೇಳಿದ್ದೀರಿ. ಅದು ಅವರ ತಾಯಿಯ ತವರು ಮನೆ ಎನ್ನುವ ಉದ್ದೇಶದಿಂದ ತಾವು ಆ ಒಂದು ಬೇಡಿಕೆಯನ್ನು ಮಂಡಿಸಿದ್ದೀರಿ. ಅದನ್ನು ಖಂಡಿತವಾಗಿ ಆದ್ಯತೆ ಮೇರೆಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ: ಕಲಸವನ್ನು ಕೈಗೆತ್ತಿಕೊಳ್ಳುತ್ತೇವೆಂದು ಮಾನ್ಯ ಸಚಿವರು ಹೇಳಬೇಕು.

ಶ್ರೀಮತಿ ರಾಣಿ ಸತೀಶ್: ಈಗ ಹಣ ಇಲ್ಲ, ಹಣ ಬಂದ ಮೇಲೆ ನಾವು ತಕ್ಷಣ ಕಲಸವನ್ನು ಕೈಗೆತ್ತಿಕೊಳ್ಳುತ್ತೇವೆ.